ಅನುಭವಿಸಿ ದಕ್ಕಿಸಿಕೊಳ್ಳಬೇಕಾದ ಸುಖವಾದರೂ ಏನು? ನಮ್ಮ ಒಡವೆಗಳನ್ನು ಹುಡುಕಿಕೊಟ್ಟರೆ ಸಾಕೆಂಬ ಭಾವ ಅವಳ ಮಾತಿನಲ್ಲಿತ್ತು. ಅದಕ್ಕೆ ಆ ಎಸ್‌ಐ ಏರು ದನಿಯಲ್ಲಿ, 'ನೋಡಮ್ಮ, ಏನೋ ಹೆಲ್ಪ್ ಮಾಡೋಣ ಅಂತ ಬಂದೆ. ಹೊಸ್ದಾಗಿ ಮನೆ ಬೇರೆ ಕಟ್ಟಿಸಿದ್ದೀರ... ಅದರ ಲೋನು ತಲೆ ಮೇಲೆ ಇರುತ್ತೆ. ಮಿಡ್ಲ್ ಕ್ಲಾಸ್ ಫ್ಯಾಮಿಲಿಗಳ ಕಷ್ಟ ಗೊತ್ತಿರೋದ್ರಿಂದ ಬಂದೆ. ನಿಮ್ದೇ ಒಡವೆ ಬೇಕಂದ್ರೆ ಹಾಗೆಲ್ಲ ಸಿಗೋದಿಲ್ಲ. ಯಾವುದೋ ರಾಜ್ಯ... ಯಾರ್ದೋ ಮನೆ ಸೇರಿರುತ್ತೆ... ಇದೇ ತರ ಒಂದೆರಡು ವರ್ಷ ಕೋರ್ಟ್‌ಗೆ ಅಲೆದಾಡಿ ಗೊತ್ತಾಗುತ್ತೆ. ಬೇಕೂಂದ್ರೆ ಹೇಳಿ, ಇಲ್ಲಾಂದ್ರೆ ಎದ್ದು ಹೋಗ್ತೀನಿ... ನಿಮ್ಮಂತೋರು ಇಂತಾದ್ಕೆಲ್ಲ ಒಗ್ಗೋಲ್ಲ. ದೊಡ್ದೊಡ್ಡ ಮನೆಗ್ಳೋರೆ ಸರಿ' ಎಂದು ಗದರಿಸಿದ್ದ. ಅವಳು ತಡಬಡಾಯಿಸಿದ್ದಳು.

ಈ ರೀತಿಯ ವ್ಯವಹಾರಗಳು ಹೇಗೆ ನಡೆಯುತ್ತವೆಂಬುದನ್ನು ಸುರೇಶ ಒಂದಷ್ಟು ಕೇಳಿ ತಿಳಿದಿದ್ದ. ಹೋದ ಒಡವೆಗಳು ವರ್ಷಗಳು ಕಳೆದಿದ್ದರೂ ಸಿಗದಂತಹ ಉದಾಹರಣೆಗಳನ್ನು ಅವನು ಬಲ್ಲ. ಹಾಗಾಗಿ ಇದು ಒಳ್ಳೆಯ ಸದವಕಾಶ. ತಾವೇನೂ ಮೋಸ ಮಾಡುತ್ತಿಲ್ಲ. ತಮ್ಮದನ್ನು ಇನ್ಯಾರೋ ಅನುಭವಿಸ್ತಾರೆ; ಇನ್ಯಾರದ್ದನ್ನೋ ತಾವು. ಇದರಲ್ಲಿ ತಪ್ಪೇನು ಬಂತು ಎಂದು ಹೆಂಡತಿಗೆ ಸಮಾಧಾನ ಮಾಡಿ ಒಪ್ಪಿಸಿದ್ದ. ಆ ಕ್ಷಣಕ್ಕೆ ಅವಳಿಗೆ ಸುರೇಶ ಹೇಳಿದ್ದು ಸರಿಯಾಗೆ ಕಂಡಿತ್ತು. ತಾವೇನು ಇನ್ನೊಬ್ಬರದ್ದನ್ನು ಕಿತ್ತು ತಿನ್ನುತ್ತಿಲ್ಲವಲ್ಲ. ವ್ಯವಸ್ಥೆಯಲ್ಲಿ ಇರುವಂತಹ ಅವಕಾಶವೆ! ಆದರೆ ಲಂಚ ಅಂತ ಕೊಡಬೇಕು ಅಷ್ಟೆ. ಈಗಿನ ಕಾಲದಲ್ಲಿ ಲಂಚದ್ದೇನು ಒಂದು ಸಮಸ್ಯೆಯೇ ಅಲ್ಲ. ಗ್ಯಾಸ್ ಸಿಲಿಂಡರ್ ಹಾಕುವವನಿಂದ ಹಿಡಿದು ಪ್ರತಿ ನಿತ್ಯವೂ ಯಾವುದೋ ಒಂದು ರೂಪದಲ್ಲಿ ಲಂಚ ಕೊಡುತ್ತಲೇ ಇರುತ್ತೇವೆ ಎಂದುಕೊಂಡು ಒಪ್ಪಿಕೊಂಡಿದ್ದಳು. ಇದಾದ ಒಂದು ವಾರಕ್ಕೆ ಒಡವೆಗಳು ಅವಳ ಕೈ ಸೇರಿದ್ದವು. ತನ್ನದಲ್ಲದ ಚಂದ್ರಹಾರ, ಮೂರೆಳೆ ಸರ, ಸೊಗಸಾದ ವಿನ್ಯಾಸ ಹೊಂದಿದ್ದ ಬಳೆಗಳು... ಹೀಗೆ ಇವುಗಳನ್ನು ನೋಡಿದ ಮೇಲೆ ಅವಳಲ್ಲಿ ಪಾಪಪ್ರಜ್ಞೆ ಜಾಗೃತವಾದದ್ದು. ಯಾವ ಹೆಣ್ಣುಮಗಳು ಎಷ್ಟು ಕಷ್ಟ ಪಟ್ಟು ಮಾಡಿಸಿಕೊಂಡಿದ್ದೋ... ಈ ಚಂದ್ರಹಾರ ಯಾರದ್ದೋ... ಈ ಮೂರೆಳೆ ಸರ ಯಾರದ್ದೋ... ಈ... ಈ ಬಳೆ ಯಾರದ್ದೋ ಎಂದು ಅವುಗಳನ್ನು ನೋಡಿದಾಗಲೆಲ್ಲ ನೊಂದುಕೊಳ್ಳುತ್ತಾಳೆ. ಹಾಗಾಗಿಯೇ ಪ್ರತೀಸಾರಿ ಅಡುಗೆ ಮನೆಯ ಕಿಟಕಿಯನ್ನು ನೋಡಿದಾಗ ತಲೆ ತಗ್ಗಿಸಿಬಿಡುತ್ತಾಳೆ.

ಮಧ್ಯಾಹ್ನ ಒಂದು ಗಂಟೆಯ ಸುಮಾರಿಗೆ ಬ್ಯಾಟರಾಯನಪುರ ಬಳಿ ಬಂದಿಳಿದ ಸುಗುಣ, ರಮ್ಯಳಿಗೆ ಫೋನ್ ಮಾಡಿದಳು. ರಮ್ಯಳು ಟ್ಯಾಕ್ಸಿ ಬುಕ್ ಮಾಡಿ ಅವಳನ್ನು ಕರೆಸಿಕೊಂಡಳು. ಮನೆಯೊಳಗೆ ಬಂದ ಸುಗುಣ 'ನಿಮ್ಮ ಬೆಂಗ್ಳೂರಿನ ಬಿಸ್ಲು ಬಾರಿ ಹಿಂಸೆ ಕೊಡುತ್ತೆ ಕಣೆ' ಅಂತಲೆ ಮಾತು ಶುರುಮಾಡಿದಳು. ಪ್ರಯಾಣದ ದಣಿವಿನ ಮೇಲೆ ಸವಾರಿ ಮಾಡಿದ್ದ ಬಿಸಿಲು ಅವಳ ಬಾಯಿಂದ ಆ



ರೀತಿಯ ಮಾತನ್ನಾಡಿಸಿತ್ತು. ಸೋಫಾದಲ್ಲಿ ಕೂರುತ್ತ ತಿರುಗುತ್ತಿರುವ ಫ್ಯಾನಿಗೆ ಮುಖವೊಡ್ಡಿದಳು. ಎದುರಿಗಿದ್ದ ಟೀವಿಯಲ್ಲಿ ದೊಡ್ಡ ಉದ್ಯಮಿಯೊಬ್ಬ ತಾನು ಬ್ಯಾಂಕುಗಳಿಂದ ಪಡೆದಿದ್ದ ಸಾವಿರಾರು ಕೋಟಿ ಸಾಲವನ್ನು ಪಾವತಿಸಲಾಗದೆ ಬೇರೆ ದೇಶಕ್ಕೆ ಹಾರಿ ತಲೆಮರೆಸಿಕೊಂಡಿರುವ ವಿಷಯವು ರಸವತ್ತಾಗಿ ಬಿತ್ತರವಾಗುತ್ತಿತ್ತು. ಐದಾರು ನಿಮಿಷ ದಣಿವಾರಿಸಿಕೊಂಡ ನಂತರ ರಮ್ಯಳಿಗೆ, ಸುರೇಶ್ ಮತ್ತು ಮಗ ಎಲ್ಲಿ ಎಂದು ಕೇಳಿದಳು.

'ಸುರೇಶ್ ಆಫೀಸಿಗೆ ಹೋಗಿದ್ದಾರೆ ಕಣೆ... ಮಗ ಮಾಮೂಲಿ ಪ್ಲೇಹೋಮ್‌ಗೆ. ಸಂಜೆ ರಿಸೆಪ್ಷನ್ನಿಗೆ ಅವರೂ ಬರ್ತಾರೆ' ಎಂದು ನುಡಿದಳು. ಅವರ ಮಾತುಗಳು ಸುಮಾರು ಹೊತ್ತು ಮುಂದುವರೆದವು. ಗಂಡ, ಮಕ್ಕಳು, ಅತ್ತೆ, ಮಾವ, ಆಸ್ತಿ, ಪ್ರೀತಿ, ದ್ವೇಷ, ಭಕ್ತಿ, ವೈರಾಗ್ಯ... ಹೀಗೆ ಎಲ್ಲವೂ ಬಂದುಹೋದವು. ಆದರೆ ಅಪ್ಪಿತಪ್ಪಿಯೂ ರಮ್ಯಳು ತನ್ನ ಒಡವೆಗಳ ಬಗ್ಗೆ ಮಾತು ತೆಗೆಯಲಿಲ್ಲ. ಸುಗುಣಳೇ ಆರು ತಿಂಗಳ ಹಿಂದೆ ಮೈದುನನ ಮದುವೆಯಲ್ಲಿ ಕಳುವಾಗಿದ್ದ ತಮ್ಮ ಒಡವೆಗಳು ಇನ್ನೂ ಸಿಕ್ಕಿಲ್ಲವೆಂದು ನೋವು ತೋಡಿಕೊಂಡಳು. ತನ್ನ ಹಾಗೂ ಅತ್ತೆಯ ಒಡವೆಗಳು ಸೇರಿ ಸುಮಾರು ಹದಿನೈದು ಲಕ್ಷ ಬೆಲೆ ಬಾಳುತಿದ್ದವೆಂದು ತಿಳಿಸಿ ಕಣ್ಣೀರುಹಾಕಿದಳು.

ಅಂದು ಸಂಜೆ ಬಿಸಿಲಿನ ತಾಪ ಇಳಿಯತೊಡಗಿತ್ತು. ಕಿಟಕಿಗಳಿಂದ ತಣ್ಣಗೆ ನುಗ್ಗಿ ಬರುತ್ತಿದ್ದ ಗಾಳಿ ಮನೆಯೊಳಗೆ ಹಿತವಾದ ವಾತಾವರಣವನ್ನು ಹುಟ್ಟು ಹಾಕಿತ್ತು. ದೂರದಲ್ಲೆಲ್ಲೋ ಗುಂಪುಕಟ್ಟಿಕೊಂಡಿರುವ ಮೋಡಗಳು ಬೆಂಗಳೂರಿನ ಎದೆಯ ಮೇಲೆ ಸವಾರಿ ಮಾಡಲು ಪಿತೂರಿ ನಡೆಸುತ್ತಿರುವಂತೆ ತೋರುತ್ತಿತ್ತು. ಕಿಟಕಿಗಳಿಗೆ ಹಾಕಿದ್ದ ಬಣ್ಣಬಣ್ಣದ ಕರ್ಟನ್ ಬಟ್ಟೆಗಳು ತುಸುವೇ ಮೇಲಕ್ಕೆ ಹಾರುತ್ತ ಸಂಭ್ರಮಿಸುತ್ತಿದ್ದವು. ಆರು ಗಂಟೆಯ ಹೊತ್ತಿಗೆ ರಮ್ಯ ಮತ್ತು ಸುಗುಣ ರೆಡಿಯಾಗತೊಡಗಿದರು.

ಏರ್‌ಪೋರ್ಟ್ ರಸ್ತೆಯ ಚಿಕ್ಕಜಾಲದ ಬಳಿ ಇರುವ ಛತ್ರದಲ್ಲಿ ಆರತಕ್ಷತೆ ಇರುವುದು. ರಮ್ಯಳ ಗಂಡ ಸುರೇಶ ಮತ್ತು ಮಗ ಆಗಲೇ ತಯಾರಾಗಿ ಕುಳಿತಿದ್ದರು. ಸರಿಯಾಗಿ ಆರೂವರೆಗೆ ಬುಕ್ ಮಾಡ್ತೀನಿ ಎಂದು ಸುರೇಶ ತಿಳಿಸಿದ್ದ. ರಮ್ಯಳಿಗಿಂತ ಮುಂಚಿತವಾಗಿ ಸುಗುಣ ತಯಾರಾಗಿ ಬಂದು ಸೋಫಾದಲ್ಲಿ ಕುಳಿತು ಮೊಬೈಲಿನ ಮೇಲೆ ಬೆರಳಾಡಿಸುತ್ತಾ ಸುರೇಶನ ಜೊತೆಗೆ ಹರಟತೊಡಗಿದಳು. ರೂಮಿನ ಒಳಗೆ ಕಿಟಕಿಯ ಕರ್ಟನ್ ಬಟ್ಟೆಗಳ ಕುಣಿತಕ್ಕೆ ಪುಳಕಿತಗೊಂಡ ರಮ್ಯ ಒಡವೆಗಳನ್ನು ತೆಗೆದು ಹಾಕಿಕೊಂಡಳು. ರೇಶಿಮೆ ಸೀರೆಯ ಬಣ್ಣಕ್ಕೆ ಮತ್ತು ವಿನ್ಯಾಸಕ್ಕೆ ಒಪ್ಪುವಂತಹ ಚಂದ್ರಹಾರದ ಹೊಳಪಿಗೆ ಮೋಹಗೊಂಡಳು. ಮೊಬೈಲ್ ಎತ್ತಿಕೊಂಡು ಒಂದು ಸೆಲ್ಫಿ ತೆಗೆದಳು. ಸೆಲ್ಫಿಯಲ್ಲಿ ತನ್ನ ಅಂದಕ್ಕೆ ತಾನೇ ಬೆರಗಾಗಿ ಹಿತವಾಗಿ ನಕ್ಕು ಒಂದಷ್ಟು ಸ್ನೇಹಿತರಿಗೆ ವಾಟ್ಸ್‌ಆಪ್ ಮಾಡಿದಳು. ಅವಳ ಮನಸ್ಸು ಕಿಟಕಿಯ ಕರ್ಟನ್ನಿನಂತೆ ಕುಣಿಯತೊಡಗಿತು. ಬೆನ್ನ ಮೇಲೆ ಹರಡಿದ್ದ ಒಂದಷ್ಟು ಕೂದಲ ರಾಶಿಯನ್ನು ಎರಡೂ ಕೈಗಳಿಂದ ಹಿಡಿದು ಎದೆಯ ಇಕ್ಕೆಲೆಗಳ ಮೇಲೆ ಇಳಿಬಿಟ್ಟು ಬೆರಳುಗಳಿಂದ ಒಂದೆರಡು ಬಾರಿ ತೀಡಿದಳು. ಹಾಗೆ ತೀಡುವಾಗ ಬಲಗೈಯಲ್ಲಿದ್ದ ಮೊಬೈಲ್ ಸಹ ಅವಳ ಕೂದಲನ್ನು ತೀಡಿತ್ತು. ಮತ್ತೊಮ್ಮೆ ಸೆಲ್ಫಿ ಆನ್ ಮಾಡಿ ಮುಖವನ್ನೊಮ್ಮೆ ನೋಡಿಕೊಂಡಳು. ಅವಳ ಖುಷಿ ದುಪ್ಪಟ್ಟಾಗತೊಡಗಿತು. ಬೆಳಿಗ್ಗೆ ಟೀವಿ ನುಡಿದಿದ್ದ ದಿನ ಭವಿಷ್ಯ ನೆನಪಿಗೆ ಬಂದು ಅವಳ ನಂಬಿಕೆ ಮತ್ತಷ್ಟು ಬಲಗೊಂಡಿತು. ಅದೇ ಹುಮ್ಮಸ್ಸಿನಲ್ಲಿ ರೂಮಿನ ಬಾಗಿಲು ತೆಗೆದು ಹಾಲಿಗೆ ಬಂದು ನಗುತ್ತಾ ನಿಂತುಕೊಂಡಳು.

ಸುಗುಣ ವಿಚಿತ್ರವಾದ ಕುತೂಹಲದಲ್ಲಿ ರಮ್ಯಳು ಧರಿಸಿದ್ದ ಚಂದ್ರಹಾರದ ಕಡೆಗೇ ನೋಡತೊಡಗಿದಳು. ನಂತರ ನಿಧಾನಕ್ಕೆ ಕೈಗಳಲ್ಲಿರುವ ವಿಶೇಷ ವಿನ್ಯಾಸದ ಬಳೆಗಳನ್ನು ದೃಷ್ಟಿಸಿದಳು. ನಂತರ ರಮ್ಯಳ ಕಣ್ಣುಗಳನ್ನೇ ನೋಡತೊಡಗಿದಳು. ತನ್ನನ್ನು ಅವಳು ತದೇಕಚಿತ್ತದಿಂದ ನೋಡುವಷ್ಟು ಅಂದವಾಗಿ ಕಾಣುತ್ತಿದ್ದೇನೆಯೇ ಎಂದುಕೊಳ್ಳುತ್ತಾ ಹುಬ್ಬುಗಳನ್ನು ಹಾರಿಸಿ ಏನು ಎಂದು ಕೇಳಿದಳು. ಸುಗುಣ ತನ್ನ ತೋರುಬೆರಳನ್ನು ಚಂದ್ರಹಾರದ ಕಡೆಗೆ ತೋರಿಸಿ 'ಆ ವಡವಿ ನಮ್ದು... ನನ್ನತ್ತೇದು. ಮತ್ತೀ ಬಳೆಗ್ಳೂ...' ಎಂದು ನುಡಿದಳು.

ರಮ್ಯ ಕಲ್ಲಿನಂತೆ ನಿಂತುಬಿಟ್ಟಳು. ಸುಗುಣ ಮತ್ತೆ 'ನೀನಾವತ್ತು ಆತುರಾತುರಾಗಿ ವಂಟು ಬಂದಾಗ್ಲೆ ನಮ್ಗೆ ಏನೊ ಡೌಟೊಡೆದಿತ್ತು' ಎಂದು ನುಡಿದು ಮತ್ತೆ ರಮ್ಯಳ ಕಣ್ಣುಗಳನ್ನೇ ದೃಷ್ಟಿಸತೊಡಗಿದಳು. ಅವಳ ಆ ನೋಟವನ್ನು ರಮ್ಯಳಿಗೆ ಎದುರಿಸಲಾಗದೆ, 'ಬಂದೆ... ಟೀ ತರ್ತೀನಿ' ಎನ್ನುತ್ತಾ ಅಡುಗೆಮನೆಗೆ ನಡೆದಳು. ಅಲ್ಲಿ ಕಿಟಕಿಯ ಮುಂದೆ ನಿಂತು ಅದನ್ನೇ ತದೇಕಚಿತ್ತದಿಂದ ನೋಡತೊಡಗಿದಳು. ತನ್ನಿಚ್ಛೆಯಂತೆ ಪ್ರತಿಷ್ಠಾಪನೆಗೊಂಡಿರುವ ಕಿಟಕಿಯು ತನಗೆ ಏನನ್ನೋ ಹೇಳುತ್ತಿರುವ ಹಾಗನಿಸಿತು. ಕಿಟಕಿಯ ಆಚೆಗೆ ದೂರದಲ್ಲಿ ಕಾಣುತ್ತಿದ್ದ ಸೂರ್ಯ ಕಾಂಕ್ರೀಟ್ ಮನೆಗಳ ಹಿಂದಕ್ಕೆ ಜಾರುತ್ತ ನಿಧಾನಕ್ಕೆ ಮರೆಯಾಗುತ್ತಿದ್ದ. ಅವಳು ಇನ್ನೇನು ಇಂಚಿಂಚಾಗಿ ಕಿಟಕಿಯಿಂದ ತೂರಿ ಬರಲು ಹವಣಿಸುತ್ತಿರುವ ಮಬ್ಬುಗತ್ತಲಿಗೆ ಮುಖವೊಡ್ಡಿ ಎದೆಯೊಡ್ಡಿ ಹಾಗೇ ನಿಂತುಬಿಟ್ಟಳು. ■